Local Fund Dispensaries (Allopathic) in Rural and Urban areas in the State

557 SRI H. L. THIMMEGOWDA (Basavanagudi).— Will the Minister for Health and Family Welfare be pleased to state.—

(a) number of Local Fund Dispensaries (Allopathic) in rural and urban areas in the State.—

(b) the money spent on the medicines supplied to each of these L. F. Dispensaries both in rural and urban areas (for the last 3 years).

(c) the money spent per year on the salary of the Doctor and other staff in each of these dispnesaries (during the last 3 years) ?

SRI A. K. ABDUL SAMAD (Minister for Health and Family Welfare).—

(a)

Urban	...	30
Rural	...	248
Total		278

(b) The amount reported to have been spent on medicines on these dispensaries are given below :

1977-78	...	Rs. 22.93 lakhs
1978-79	...	do
1979-80	...	do

(c) The amounts reported to have been spent on the salary of the staff in these dispensaries are given below :

1977-78	...	Rs. 97.05 lakhs
1978-79	...	Rs. 105.92
1979-80	...	Rs. 113.29 ,,

ಶ್ರೀ ಎಚ್. ಎಲ್. ತಿಮ್ಮೇಗೌಡ.—ನಾನು ಪ್ರತಿಯೊಂದು ಸ್ಥಳೀಯ ನಿಧಿ ಔಷಧಾಲಯಗಳಿಗೆ ಸರಬರಾಜು ಮಾಡಿದ ಔಷಧಿಗಳಿಗಾಗಿ ಖರ್ಚು ಮಾಡಿದ ಮೊಬಲಗೆಷ್ಟು ಎಂದು ಕೇಳಿದ್ದರೆ ತಾವು ಎಲ್ಲ ಔಷಧಾಲಯಗಳನ್ನು ಸೇರಿಸಿ ಕಳೆದ ಮೂರು ವರ್ಷಗಳಲ್ಲಿ ಎಷ್ಟೆಷ್ಟು ಹಣ ಖರ್ಚಾಗಿದೆ ಎಂದು ಹೇಳಿದ್ದೀರಿ. ಪ್ರತಿ ಔಷಧಾಲಯಕ್ಕೆ ಖರ್ಚು ಮಾಡುತ್ತಿರುವ ಹಣವೆಷ್ಟು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ವೈ. ರಾಮಕೃಷ್ಣ (ಆರೋಗ್ಯ ಸಚಿವರ ಪರವಾಗಿ).—ಈ ಸ್ಥಳೀಯ ನಿಧಿ ಔಷಧಾಲಯಗಳಿಗೆ ಪ್ರತಿವರ್ಷವೂ ೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಸರ್ಕಾರದ ಆದೇಶ ಇತ್ತು. ಆದರೆ ತಾರೀಖು ೧-೪-೧೯೮೧ರಿಂದ ಹೆಚ್ಚು ಹಣ ಖರ್ಚು ಮಾಡುವ ಬಗ್ಗೆ ಸರ್ಕಾರದ ಆಜ್ಞೆಯನ್ನು ಹೊರಡಿಸಲಾಗಿದೆ. As per that Government Order, the Local Fund Dispensary at taluk level will get drugs worth Rs. 10,000, Local Fund Dispensary at taluk level with maternity section will get Rs. 25,000, if a dental clinic is attached to LFD an additional sum of Rs. 2,000 is given. Further, if beds are attached, for a bed strength of 25 to 30

Rs. 40,000 is given ; for 50 beds Rs. 50,000 and for 75 beds Rs. 75,000 In addition to the above provision, for treatment of Malaria, Tuberculosis, Leprosy, Anamia and other vitamin deficiencies, free supply of tablets is provided.

ಶ್ರೀ ಎಚ್. ಎಲ್. ತಿಮ್ಮೇಗೌಡ.— ತಾವು ತಾಲ್ಲೂಕ್ ಮಟ್ಟದಲ್ಲಿರುವ ಆಸ್ಪತ್ರೆಗಳಿಗೆ ಸಂಬಂಧ ಪಟ್ಟಂತೆ ಹೇಳಿದಿರಿ. ಆದರೆ ಗ್ರಾಮಾಂತರ ಪ್ರದೇಶದಲ್ಲಿರುವ ಸ್ಥಳೀಯ ನಿಧಿ ಆಸ್ಪತ್ರೆಗಳಿಗೆ ಎಷ್ಟು ಹಣವನ್ನು ಔಷಧಿಗಳಿಗಾಗಿ ಖರ್ಚು ಮಾಡುತ್ತೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ವೈ. ರಾಮಕೃಷ್ಣ. — ಈ ವರ್ಷದಿಂದ ಅಲ್ಲಿಯೂ ಸಹ ೫ ಸಾವಿರ ರೂಪಾಯಿಗಳಿಂದ ೮ ಸಾವಿರ ರೂಪಾಯಿಗಳಿಗೆ ಹೆಚ್ಚು ಮಾಡಿದ್ದೇವೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.— ಸಿಬ್ಬಂದಿಯ ಸಂಬಳಕ್ಕಾಗಿ ಕಳೆದ ಮೂರು ವರ್ಷಗಳಿಂದ ಖರ್ಚು ಮಾಡಿದ ಮೊಬಲಗನ್ನು ಇಲ್ಲಿ ಕೊಟ್ಟಿದ್ದೀರಿ. ಇದರ ಪ್ರಕಾರ ಪ್ರತಿವರ್ಷವೂ ಸಂಮಾರು ೧೮ ಲಕ್ಷ ರೂಪಾಯಿಗಳಂತೆ ಹೆಚ್ಚು ಖರ್ಚು ಮಾಡುತ್ತಾ ಬಂದಿದ್ದೀರಿ. ಆದರೆ ಇಲ್ಲಿ ಔಷಧಗಳಿಗಾಗಿ ವರ್ಷಕೆ ಕೇವಲ ೮ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೆ ಆದು ೩ ತಿಂಗಳಿಗೂ ಸಾಲಂವುದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದರ ಜೊತೆಗೆ ಟಿಂಚರ್, ಬ್ಯಾಂಡೇಜ್ ಮೊದಲಂಗೊಂಡು ಎಲ್ಲದರ ಬೆಲೆಗಳೂ ಸಹ ಹೆಚ್ಚಾಗಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ವೈ. ರಾಮಕೃಷ್ಣ.—ಸರ್ಕಾರದ ಗಮನಕ್ಕೆ ಬಂದ ಮೇಲೆ ೫ ಸಾವಿರ ಇದ್ದದ್ದನ್ನು ೮ ಸಾವಿರಕ್ಕೆ ಹೆಚ್ಚು ಮಾಡಿದ್ದೇವೆ. ಇಷ್ಟು ಮೊತ್ತದ ಔಷಧ ಸಾಲದಿದ್ದರೆ, ಅವರು ಸರ್ಕಾರಕ್ಕೆ ಸ್ಪೆಷಲ್ ಇಂಡೆಂಟ್ ಕಳುಹಿಸಿಕೊಟ್ಟರೆ ನಾವು ಮತ್ತೆ ಕಳುಹಿಸಿಕೊಡಲಂ ಸಿದ್ದರಿದ್ದೇವೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.— ತಾವು ಕೊಡುವ ಔಷಧ ೨–೩ ತಿಂಗಳಿಗೂ ಸಾಲುವುದಿಲ್ಲ, ಡಾಕ್ಟರ್‌ಗಳಂ ಹಳ್ಳಿಗಳಿಗೆ ಹೋಗದಿರಲು ಇದೂ ಒಂದು ಕಾರಣ. ತಾವು ಕೊಡುವ ಔಷಧಗಳು ೨–೩ ತಿಂಗಳಿಗೂ ಸಾಲದಿರುವಾಗ ಯಾವ ಡಾಕ್ಟರ್ ಅಲ್ಲಿ ೧೨ ತಿಂಗಳು ಕೆಲಸ ಮಾಡಲು ಸಾಧ್ಯ ? ಆದೇ ಬೆಂಗಳೂರಿನಲ್ಲಿರುವ ಎಲ್ಲ ಆಸ್ಪತ್ರೆಗಳಿಗೂ ಸಹ ಅವಶ್ಯಕತೆ ಇರುವಷ್ಟೂ ಔಷಧಗಳನ್ನು ಕೊಡುತ್ತೀರಿ. ಅಲ್ಲಗೆ ಬರುವ ಯಾರಿಗೂ ಔಷಧ ಕೊಡದೆ ಕಳುಹಿಸುವುದಿಲ್ಲ. ಆದೇ ರೀತಿ ಹಳ್ಳಿಗಳಲ್ಲಿ ಬಡವರು ಜಾಸ್ತಿ ಇದ್ದಾರೆ. ಅವರಿಗೆಲ್ಲಾ ಉಚಿತ ವೈದ್ಯಕೀಯ ಸೇವೆ ಕೊಡುತ್ತೇವೆಂದು ಹೇಳುವ ನೀವು ಸಾಕಷ್ಟು ಔಷಧ ಕಳುಹಿಸಿಕೊಡದಿದ್ದರೆ ಹೇಗೆ ? ಕೊಡುವುದು ಸಾಲದಿದ್ದರೆ ಮತ್ತು ಅವಶ್ಯಕತೆ ಬಿದ್ದರೆ ಮತ್ತೆ ಕೊಡುತ್ತೇವೆಂದು ತಾವು ಹೇಳುವುದು ಸರಿಯಲ್ಲ. ತಾಲ್ಲೂಕ್ ಮಟ್ಟದ ಆಸ್ಪತ್ರೆಗಳಿಗೆ ೪೦ ಸಾವಿರ ರೂಪಾಯಿಗಳವರೆಗೆ ಖರ್ಚು ಮಾಡಿ ಈ ಗ್ರಾಮಾಂತರ ಪ್ರದೇಶದಲ್ಲಿರುವ ಆಸ್ಪತ್ರೆಗಳಿಗೆ ಕೇವಲ ೮ ಸಾವಿರ ರೂಪಾಯಿಗಳನ್ನು ಖರ್ಚು ಮಾಡುವುದು ಸರಿಯೇ ? ಇದು ಯಾವ ನ್ಯಾಯ ? ಆದ್ದರಿಂದ ಅಲ್ಲಿಗೆ ಅಗತ್ಯವಿರುವಷ್ಟು ಔಷಧಗಳನ್ನು ಒದಗಿಸುವಂತಹ ಆಶ್ವಾಸನೆ ಕೊಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.— ಈಗ ೮ ಸಾವಿರ ರೂಪಾಯಿಗಳಿಗೆ ಹೆಚ್ಚು ಮಾಡಿದ್ದೇವೆ. ಇದನು ೧೫ ಸಾವಿರ ರೂಪಾಯಿಗಳವರೆಗೆ ಹೆಚ್ಚು ಮಾಡಲು ಅವಕಾಶವಿದೆ. ಆದೂ ಸಾಲದಿದ್ದರೆ ಮತ್ತೆ ಕೊಡಲು ಸರ್ಕಾರ ಸಿದ್ಧವಿದೆ. ಈಗಿನ ಒಂದು ಪರಿಸ್ಥಿತಿಯನ್ನು ಒಂದೆರಡು ವರ್ಷಗಳ ಕಾಲ ನೋಡಿ ಮುಂದೆ ಬೇಕಾದರೆ ಹೆಚ್ಚು ಮಾಡೋಣ.

ಶ್ರೀ ಎಚ್. ಎಲ್. ತಿಮ್ಮೇಗೌಡ — ತಾಲ್ಲೂಕ್ ಮಟ್ಟದಲ್ಲಿ ೫೦ ಸಾವಿರ ರೂಪಾಯಿಗಳವರೆಗೆ ಖರ್ಚು ಮಾಡಲು ಅವಕಾಶವಿರುವಾಗ ಇಲ್ಲಿಗೆ ಮಾತ್ರ ೮ ಸಾವಿರ ರೂಪಾಯಿಗಳು ಸಾಕೇ ? ಇದು ೩ ತಿಂಗಳಿಗೂ ಸಾಲುವುದಿಲ್ಲ. ಆದ್ದರಿಂದ ಇನ್ನೊಂದು ಸಲ ಯೋಚನೆ ಮಾಡಿ ಇದನ್ನು ಜಾಸ್ತಿ ಮಾಡುತ್ತೀರಾ ?

ಉಪಾಧ್ಯಕ್ಷರು.— ಈ ಪ್ರಶ್ನೆಗೆ ಈಗಾಗಲೇ ಉತ್ತರ ಕೊಟ್ಟಿದ್ದಾರೆ.